ತಾರೀಖು 10ನೇ ಮಾರ್ಚಿ 1903.

ನಂ. ರ. 3589, ಡೆಪ್ಯೂಟಿ ಕಮಿಷನರಾದ ಮೆ|| ಡಿ. ದೇವರಾಜ ಅರಸಿನವರು ಸಬ್ ಡಿವಿಜ಼ನ್ ಆಫಿಸರಾದ ಮೆ|| ಪಿ. ಆರ್. ಡಬ್ಲ್ಯೂ. ವಿದಿರಾಲ್ ಯವರಿಂದ ಹಾಸನ ಡಿಸ್ಟ್ರಿಕ್ಟ್ ವ ಟ್ರೆಜರಿಯ ಚಾರ್ಜನ್ನು 1903ನೇ ಫೆಬ್ರವರಿ 3ನೇ ತಾರೀಖಿನ ಪೂರ್ವಾಹ್ನ ದಲ್ಲಿ ವಹಿಸಿರುತ್ತಾರೆ.

ಹುಕುಂ ಬವೋಜೇಬ್,
ಹೆಚ್. ವಿ. ನಂಜುಂಡಯ್ಯ,
ಜನರಲ್ ವ ರೆವಿನ್ಯೂ ಇಲಾಖೆಗಳ ಮೈಸೂರ ಗವರ್ನಮೆಂಟ್ ಸೆಕ್ರಿಟೆರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮಾ.

ತಾರೀಖು 4ನೇ ಮಾರ್ಚಿ 1903.

ನಂ. 200—1165, ಚಿತ್ರದುರ್ಗ ಡಿವೀಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜನಿಯರಾದ ಮೆ|| ಬಿ. ನಂಜುಂಡಾರಾಧ್ಯರಿಗೆ ಈಗಳೆದ ಜನವರಿ 27ನೇ ಮರ್ಕ್ಯಂ 59-368ನೇ ನಂಬರ್ ಈ ಆಫೀಸು ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 14 ದಿನಗಳ ಪ್ರಿವಿಲೇಜ್ ರಜಾ ಇನ್ನೂ 1 ದಿನ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 10ನೇ ಮಾರ್ಚಿ 1903.

ನಂ. 226—1336, ಕಾವೇರಿ ಪವರ್ ಸ್ಕೀಂ ಡಿವಿಜನಿಗೆ ಸೇರಿದ ಆಪರೇಟರ್ ಪ್ರೊಬೇಷನರಾದ ಮೆ|| ಕೆ. ಎಸ್. ಸೂನುಸಾಮಿ ಅಯ್ಯರ್ ಯವರಿಗೆ ಮಾಹೆ ಮುಜಕೂರು 9ನೇ ತಾರೀಖಿನಾರಭ್ಯ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬವೋಜೇಬ್,
ಡಬ್ಲ್ಯೂ. ಮೆಕ್‌ಹರ್ಚೇ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನಮೆಂಟ್ ಸೆಕ್ರಿಟೆರಿ.

ಜಿಯೋಲೋಜಿಕಲ್.

ಇಸ್ತಿಹಾರ್‌ನಾಮಾ.

ತಾರೀಖು 7ನೇ ಮಾರ್ಚಿ 1903.

ನಂ. 467—ಎಸ್, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ ಗಣಿಗಳ ಡೆಪ್ಯೂಟಿ ಇನ್‌ಸ್ಪೆಕ್ಟರಾದ ಮೆ|| ಜಾರ್ಜ್ ಲ್ಯಾವೆಲಿ ಯವರಿಗೆ 1903ನೇ ಫೆಬ್ರವರಿ 17ನೇ ತಾರೀಖಿನಾರಭ್ಯ 12 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಹುಕ್ತುಂ ಬವೋಜೇಬ್,
ಡಬ್ಲ್ಯೂ. ಎಫ್. ಸ್ಮೀತ್,
ಜಿಯೋಲೋಜಿಕಲ್ ಇಲಾಖಾ ಗವರ್ನಮೆಂಟ್ ಸೆಕ್ರಿಟೆರಿ.